ಅವಶ್ಯ ವಸ್ತುಗಳ ವಿತರಣೆ ಬಗ್ಗೆ.

೧೮೫ ಶ್ರೀ ವಂಶ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆಹಾರ ಮಂತ್ರಿ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅವಶ್ಯ ವಸ್ತುಗಳ ಕಾನೂನಿನ ಅವಧಿಯನ್ನು ವಿಸ್ತರಿಸಲು ಕಾರಣವೇನು ?

ಆ) ಆಹಾರ ಸಾಮಗ್ರಿಗಳನ್ನು ಬಂಧನಕ್ಕೆ ಒಳಪಡಿಸಿದಾಗ (ಜಪ್ತಿ) ವೈಯಕ್ತಿಕ ಜಾಮೀನಿನ ಮೇಲೆ ಬಿಡುಗಡೆ ಮಾಡದಿರುವುದಕ್ಕೆ ಕಾರಣವೇನು ?

ಇ) ಹಲವಾರು ಅಧಿಕಾರಿಗಳು ಕಾಯಿದೆಯ ದುರುಪಯೋಗ ಪಡೆಯುತ್ತಿದ್ದು, ವ್ಯಾಪಾರಸ್ಥರಿಗೆ ಹಾಗೂ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಈ) ಸಾಮಾನ್ಯ ಹಾಗೂ ಅತಿ ಚಿಕ್ಕ ವ್ಯಾಪಾರಸ್ಥರನ್ನು ಕಾಯಿದೆಯ ಪರಿಮಿತಿಯಲ್ಲಿ ತಂದಿದ್ದನ್ನು ಕೈ ಬಿಡಲು ಸರ್ಕಾರಕ್ಕಿರುವ ತೊಂದರೆಯೇನು ?

ಉ) ಸರ್ಕಾರದವರು ಒಂದೇ ಇಲಾಖೆಯಿಂದ ಇದನ್ನು ನಿಯಂತ್ರಿಸಲು ಯಾವ ಕ್ರಮ ಕೈಕೊಳ್ಳಲಾಗುವುದು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ(ಆಹಾರ ಮಂತ್ರಿ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಭಾರತ ಸರ್ಕಾರಕ್ಕೆ ಸಂಬಂಧಿಸಿರುವುದರಿಂದ ಉದ್ಭವಿಸುವುದಿಲ್ಲ.

ಆ) ಅವಶ್ಯ ವಸ್ತುಗಳ ಕಾಯಿದೆ ೧೯೫೫ರ ಸೆಕ್ಷನ್ ೬ಎ ಪ್ರಕಾರ, ಆಹಾರ ಪದಾರ್ಥ ಹಾಗೂ ಇತರೇ ಅವಶ್ಯ ವಸ್ತುಗಳನ್ನು ಜಪ್ತಿ ಮಾಡಿದಾಗ ಅವುಗಳನ್ನು ತಕ್ಷಣವೇ ಜಿಲ್ಲಾಧಿಕಾರಿಗಳ ಸಮ್ಮುಖ ತನಿಖೆಗೆ ಒಳಪಡಿಸಬೇಕಾಗುತ್ತದೆ. ಆದಂದರಿಂದ ವೈಯಕ್ತಿಕ ಜಾಮೀನಿನ ಮೇಲೆ ಆಹಾರ ಸಾಮಗ್ರಿಗಳನ್ನು ಬಿಡುಗಡೆ ಮಾಡಲಾಗುವುದಿಲ್ಲ.

ಇ) ನಿರ್ದಿಷ್ಟವಾದ ದೂರು ಬಂದು, ವಿಚಾರಣೆಯಲ್ಲಿ ದುರುಪಯೋಗವಾಗಿರುವುದು ನಿಜವಾದಲ್ಲಿ ತಪ್ಪಿತಸ್ಥ ಅಧಿಕಾರಿಯ ಮೇಲೆ ಕ್ರಮ ಜರುಗಿಸಲಾಗುವುದು.

ಈ) ಸಾಮಾನ್ಯ ಹಾಗೂ ಅತೀ ಚಿಕ್ಕ ವ್ಯಾಪಾರಸ್ಥರನ್ನು ಕಾಯಿದೆ ಪರಿಮಿತಿಯಲ್ಲಿ ಕೈ ಬಿಡಲಾಗಿದೆ. ಯಾವುದೇ ನಿಗದಿತ ಸಮಯದಲ್ಲಿ ಒಟ್ಟು ಆಹಾರ ಧಾನ್ಯಗಳ ಪ್ರಮಾಣ ೨೦ ಕ್ವಿಂ. ಸಕ್ಕರೆ ಪ್ರಮಾಣ ೫ ಕ್ವಿಂ. ಖಾದ್ಯ ತೈಲದ ಪ್ರಮಾಣ ೫ ಕ್ವಿಂ. ಖಾದ್ಯ ತೈಲ ಬೀಜ ೩೦ ಕ್ವಿಂ. ಬೆಲ್ಲ ೨೦ ಕ್ವಿಂ ಕ್ಕಿಂತ ಮಿಗದಂತೆ ವ್ಯಾಪಾರ ಮಾಡುವ ವ್ಯಾಪಾರದಾರರಿಗೆ ಕರ್ನಾಟಕ ಅವಶ್ಯ ವಸ್ತುಗಳ ಲೈಸೆನ್ಸ್ ಆದೇಶ ೧೯೮೬ ಕೆಳಗೆ ಲೈಸೆನ್ಸ್ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.

ಉ) ಅವಶ್ಯ ವಸ್ತು ಕಾಯಿದೆ ಪ್ರಕಾರ ಆಹಾರ ಇಲಾಖೆ ಜೊತೆಗೆ ಪೋಲೀಸ್ ಮತ್ತು ರೆವಿನ್ಯೂ ಅಧಿಕಾರಿಗಳಿಗೂ ಕಾಯ್ದೆ ಜಾರಿಗೊಳಿಸುವ ಅಧಿಕಾರ ನೀಡಿರುವುದರಿಂದ ಕಾಯ್ದೆ ತಿದ್ದುಪಡಿಯಾಗದೆ ಒಂದೇ ಇಲಾಖೆಯಿಂದ ನಿಯಂತ್ರಿಸಲು ಸಾಧ್ಯವಿಲ್ಲ.

ಕರ್ನಾಟಕ ಸರ್ಕಾರದ ಆರ್ಥಿಕ ವ್ಯವಸ್ಥೆ ಅಭದ್ರತೆ ಬಗ್ಗೆ.

೩೦ ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧-೬ ೧೯೮೭ ರಿಂದ ೧೫-೬-೧೯೮೭ರವರೆಗೆ ಸರ್ಕಾರಿ ಖಜಾನೆಗಳಲ್ಲಿ ಸರ್ಕಾರಿ ಚೆಕ್ಕುಗಳು ಮಾನ್ಯತೆ ಪಡೆಯದೆ ಹಿಂದಿರುಗಿಸಲ್ಪಟ್ಟಿದ್ದು ನಿಜವೇ ?

ಆ) ಹಾಗಿದ್ದಲ್ಲಿ, ಸರ್ಕಾರಿ ಹಣಕಾಸು ಪರಿಸ್ಥಿತಿ ಅಭದ್ರವಾಗಿದೆಯೆಂದು ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕಾ ಸಮ್ಮೇಳನದಲ್ಲಿ ಹೇಳಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಹಣಕಾಸಿನ ಪರಿಸ್ಥಿತಿಯನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳೇನು ?